UASB Library
Newspaper Clippings
Thursday 23-06-2022 Pg .1
Jai Kisan

ನಿ ರೈತ ಮಿತ್ರ

ರೇಷ್ಮೆ ಹುಳುಗಳಿಗೆ ಬಾಧಿಸುವ ಊಜಿ ನೊಣದ ನಿರ್ವಹಣೆ ಬಗ್ಗೆ ತಿಳಿಸಿ.

।ಸಂಜೀವ್ ರಾಮನಗರ ತಾಲೂಕು

ಊಜಿ ನೊಣವು ಹುಳುಗಳ ಸಾಕಾಣಿಕೆ ಸಮಯದಲ್ಲಿ ವಿಶೇಷವಾಗಿ ಮೂರನೇ ಹಂತದಿಂದ ಹಣ್ಣಾಗುವವರೆಗೆ ಇವುಗಳ ದೇಹದ ಮೇಲೆ ಮೊಟ್ಟೆ ಇಟ್ಟು ಅದರ ಮರಿಗಳು ಪರಾವಲಂಬಿಗಳಾಗಿ ಬೆಳೆದು ಕೊನೆಯಲ್ಲಿ ರೇಷ್ಮೆ ಹುಳುವನ್ನು ಸಾಯಿಸುತ್ತವೆ. ಊಜಿ ನೊಣವು ಬಹುತೇಕ ದೇಹದ ಗಾತ್ರದಲ್ಲಿ ಮನೆಯ ನೊಣಕ್ಕಿಂತ ದೊಡ್ಡದಾಗಿರುತ್ತದೆ. ಸಾಮಾನ್ಯವಾಗಿ ಶೇ.30ರ ವರೆಗೂ ಬೆಳೆಯನ್ನು ನಾಶಮಾಡುವ ಗಂಭೀರ ಸ್ವರೂಪ ಹೊಂದಿದೆ.



ನಿರ್ವಹಣೆ: ಊಜಿ ನೊಣದಿಂದ ರೇಷ್ಮೆ ಹುಳುವನ್ನು ಸಂರಕ್ಷಿಸಲು ವಿಶೇಷವಾಗಿ ವಿನ್ಯಾಸಗೊಳಿಸಿದ ಊಜಿ ನಿಯಂತ್ರಣ ಬಲೆ ಬಳಸಬೇಕು. ಹುಳು ಸಾಕಾಣಿಕೆ ಮನೆಯ ಕಿಟಕಿ-ಬಾಗಿಲುಗಳಿಗೆ ಮತ್ತು ಇತರ ಊಜಿ ನೊಣ ಬರುವಂಥ ಜಾಗಗಳಿಗೆ ಊಜಿ ಬಲೆ ಅಳವಡಿಸಬೇಕು. ಹುಳು ಸಾಕಣೆ ಮನೆಯ ಬಾಗಿಲಿಗೆ ಚೌಕಾಕಾರದಲ್ಲಿ ನೈಲಾನ್ ಪರದೆ ಕಟ್ಟಿ ಸೊಪ್ಪು ಕೊಂಡೊಯ್ಯುವಾಗ ನೋಡಿಕೊಂಡು, ಸೊಪ್ಪನ್ನು ಸಾಕು ಮನೆಗೆ ಸಾಗಿಸಬೇಕು. ಅಂಟು ಕಾಗದದ ಮೇಲೆ ಹಳದಿ ಬಣ್ಣದ ಅಂಟು ಮೆತ್ತಿ ತಯಾರಿಸಿದ ಊಜಿ ಅಂಟುಗಳನ್ನು ಬಳಸುವುದರಿಂದ ಊಜಿ ನೊಣಗಳು ಆಕರ್ಷಣೆಗೊಂಡು, ಅದಕ್ಕೆ ಅಂಟಿಕೊಂಡು ಸಾಯುತ್ತವೆ. ಈ ಅಂಟು ಕಾಗದಗಳನ್ನು 2-3 ಬೆಳೆಗೆ ಬಳಸಬಹುದು. ಊಜಿ ನೊಣವನ್ನು ಸಾಯಿಸುವ ಪರಾವಲಂಬಿ ಕೀಟಗಳು (Nesolynx thymus) ಸಿ.ಎಸ್.ಆರ್.ಟಿ.ಐ. ಮೈಸೂರು ಕೇಂದ್ರದಲ್ಲಿ ದೊರೆಯುತ್ತವೆ.

।ಡಾ. ಬಿ. ಎಸ್. ರಾಜೇಂದ್ರ ಪ್ರಸಾದ್ ಕೀಟಶಾಸ್ತ್ರ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

20-06-2022
Vv Pg 09



ಡಾ. ಕೆ.ಪಿ.ರಘುಪ್ರಸಾದ್



ಬಂಗಾರವಾಗಲಿ ಮುಂಗಾರು

20-06-2022
Vv Pg 09

ಕೃಷಿ ವೈವಿಧ್ಯತೆಯ ನಾಡು ಕರ್ನಾಟಕ. ರಾಜ್ಯದ ಒಟ್ಟು 190.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇ.65 ಅಂದರೆ 123.85 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆ ಕೈಗೊಳ್ಳಲಾಗುತ್ತಿದೆ. ಪ್ರತಿಶತ 30 ನೀರಾವರಿ ಪ್ರದೇಶ ಹೊಂದಿರುವ ಕರ್ನಾಟಕವು ರಾಜಸ್ಥಾನದ ನಂತರ ಅತ್ಯಂತ ಹೆಚ್ಚು ಮಳೆಯಾಶ್ರಿತ ಪ್ರದೇಶ ಹೊಂದಿದ್ದರೂ ರಾಜ್ಯಕ್ಕೆ ತನ್ನದೇ ಆದ ನೈಸರ್ಗಿಕ ವರದಾನಗಳೂ ಇವೆ. ವಿಶೇಷವಾಗಿ ನೈಋತ್ಯ ಹಾಗೂ ಈಶಾನ್ಯ ಮಾರುತಗಳು ನಮ್ಮ ಕೃಷಿಗೆ ಆಸರೆಯಾಗಿದ್ದರೆ ನಿತ್ಯಹರಿದ್ವರ್ಣದ ಅರಣ್ಯ ಸಂಪತ್ತು, ಜೀವ ನದಿಗಳು, ವಿಶಾಲವಾದ ಕಡಲತೀರ, ಅಣೆಕಟ್ಟುಗಳು, ವೈವಿಧ್ಯಮಯ ಮಣ್ಣು ರಾಜ್ಯದ ನೈಸರ್ಗಿಕ ವೈವಿಧ್ಯತೆಗೆ ಹಿಡಿದ ಕನ್ನಡಿಯಾಗಿವೆ. ಪ್ರಸ್ತುತ ರಾಜ್ಯದಲ್ಲಿ ಮುಂಗಾರು ಆರಂಭವಾಗಿದೆ. ಸಾಮನ್ಯವಾಗಿ ಜೂನ್ ತಿಂಗಳ ಮೊದಲ ವಾರ ಆಗಮಿಸುವ ಈ ಮಾರುತದ ಮೇಲೆಯೇ ರಾಜ್ಯದ ಶೇ.70 ಕೃಷಿ ಚಟುವಟಿಕೆಗಳು ಅವಲಂಬಿತವಾಗಿವೆ. ಹಾಗಾಗಿ ಕೃಷಿಕರು ಮುಂಗಾರಿಗೆ ಸೂಕ್ತವಾದ ಯೋಜಿತ ಚಟುವಟಿಕೆಗಳನ್ನು ಕೈಗೊಂಡಿದ್ದೇ ಆದಲ್ಲಿ ಉತ್ತಮ ಫಸಲು ಪಡೆಯಬಹುದು.



ಆದಾಗ್ಯೂ ರಾಜ್ಯದಲ್ಲಿ ಪೂರ್ವ ಮುಂಗಾರು ಸೇರಿ ಈಗಾಗಲೆ ವಾಡಿಕೆಗಿಂತ ಶೇ.40 ಅಧಿಕ ಮಳೆ ಆಗಿದ್ದು, ದಕ್ಷಿಣ ಒಳನಾಡು (+ಶೇ.92), ಉತ್ತರ ಒಳನಾಡು (+ಶೇ.42), ಮಲೆನಾಡು (+ಶೇ.26) ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದ ಮಳೆಯಾಗಿದ್ದರೆ, ಕರಾವಳಿಯಲ್ಲಿ ಕೊಂಚ ಹಿನ್ನಡೆಯಾಗಿದ್ದು (-ಶೇ. 12) ಮಳೆ ಕೊರತೆಯಾಗಿದೆ. ಇದನ್ನೆಲ್ಲ ಗಮನಿಸಿದಲ್ಲಿ ಹವಾಮಾನ ಬದಲಾವಣೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ರೀತಿಯ ಹವಾಮಾನ ನಮಗೆ ಹೊಂದಿಕೊಳ್ಳುವುದು ಕಷ್ಟ ಸಾಧ್ಯವಾಗಿದ್ದು, ನಾವೇ ಬದಲಾವಣೆಗಳಿಗೆ ಹೊಂದಿಕೊಳ್ಳುವ ಅನಿವಾರ್ಯತೆ ನಮ್ಮ ಮುಂದಿದೆ. ಹಾಗಾಗಿ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಪೂರ್ವ ಮುಂಗಾರು, ಮುಂಗಾರು ಆರಂಭವಾದ ನಂತರ ಕೆಲವೊಮ್ಮೆ ಅನಿರೀಕ್ಷಿತ ಒಣ ಹವೆ ಸಾಮಾನ್ಯವಾಗುತ್ತಿದ್ದು, ಇದನ್ನು ಗಮನದಲ್ಲಿರಿಸಿಕೊಂಡು ಕೃಷಿ ಚಟುವಟಿಕೆ ನಿರ್ಧರಿಸಿಕೊಳ್ಳಬೇಕಿದೆ. ಇದನ್ನೇ ನಾವು ಇತ್ತೀಚಿನ ದಿನಗಳಲ್ಲಿ ಹವಮಾನ ಚತುರ ಕೃಷಿ ಎಂದು ವ್ಯಾಖ್ಯಾನಿಸಲಾಗಿದೆ. ಇವುಗಳ ಮಧ್ಯದಲ್ಲೂ ನಮ್ಮ ರಾಜ್ಯದ ಕೃಷಿ ಕ್ಷೇತ್ರ ಹಲವು ಸವಾಲು ಎದುರಿಸುತ್ತಿದ್ದು, ಮಣ್ಣಿನಲ್ಲಿ ಕ್ಷೀಣಿಸುತ್ತಿರುವ ಸಾವಯವ ಇಂಗಾಲದ ಪ್ರಮಾಣ ಎಲ್ಲರ ಗಮನ ಸೆಳೆಯುತ್ತಿದೆ. ಯಾವುದೇ ಒಂದು ಆರೋಗ್ಯಯುತ ಮಣ್ಣಿನಲ್ಲಿ ಶೇ.0.5-3.0 ಸಾವಯವ ಇಂಗಾಲ ಹೊಂದಿರಬೇಕಾಗಿದ್ದು ಪ್ರಸ್ತುತ ಸಂಕೀರ್ಣ ಮತ್ತು ಅವೈಜ್ಞಾನಿಕ ಕೃಷಿ ಚಟುವಟಿಕೆಗಳಿಂದ ರಾಜ್ಯದ ಮಣ್ಣಿನಲ್ಲಿ ಇದರ ಪ್ರಮಾಣ ಶೇ. 0.5ಗಿಂತ ಕಡಿಮೆಯಾಗಿರುವುದರಿಂದ ಮಣ್ಣು ತನ್ನ ಸತ್ವ ಮತ್ತು ಜೀವಂತಿಕೆ ಕಳೆದುಕೊಳ್ಳುತ್ತಿದೆ. ಆದ್ದರಿಂದ ಪ್ರಸ್ತುತ ಮುಂಗಾರಿನ ಹೊಸ್ತಿಲಲ್ಲಿರುವ ಕೃಷಿಕರು ಆದಷ್ಟು ಮಣ್ಣಿಗೆ ಹಸಿರೆಲೆ ಗೊಬ್ಬರ ಹಾಗೂ ಸಾವಯವ ಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಸುವುದು ಅತ್ಯವಶ್ಯಕ. ಈಗಾಗಲೆ ಉತ್ತಮ ಮಳೆಯಾಗಿರುವ, ಸ್ವಲ್ಪ ತಡವಾಗಿ ಬಿತ್ತನೆ ಮಾಡುವ ಕೃಷಿಕರು ಲಭ್ಯವಿರುವ ತೇವಾಂಶ ಬಳಸಿಕೊಂಡು ಹಸಿರೆಲೆ ಬೆಳೆಗಳಾದ ಡಯಂಚಾ, ಸೆಣಬು, ಹುರುಳಿ, ಮಕುನಾ ಅಥವಾ ಯಾವುದೇ ದ್ವಿದಳ ಧಾನ್ಯಗಳನ್ನು ಬೆಳೆದು ಮಣ್ಣಿಗೆ ಸೇರಿಸುವುದರ ಮೂಲಕ ಸಾವಯವ ಅಂಶವನ್ನು ಕಾಪಾಡಿಕೊಳ್ಳಬಹುದಾಗಿದೆ.

ಮುಂಗಾರಿಗೆ ಪಂಚ ಸೂತ್ರಗಳು

1. ಸೂಕ್ತ ಬೆಳೆ ಮತ್ತು ಬೆಳೆ ಪದ್ಧತಿಗಳ ಆಯ್ಕೆ: ಮುಂಗಾರು ಮಳೆ ಆಧರಿಸಿ ಅದಕ್ಕೆ ಸೂಕ್ತವಾದ ಬೆಳೆ ಹಾಗೂ ಬೆಳೆ ಪದ್ಧತಿಗಳ ಆಯ್ಕೆ ಮೂಲಕ ಉತ್ತಮ ಇಳುವರಿ ಪಡೆಯಬಹುದು. ಇದಕ್ಕೆ ಪೂರಕವಾಗಿ ಏಕ ಬೆಳೆ ಪದ್ಧತಿ ಮೇಲೆ ಅವಲಂಬಿತವಾಗದೆ 2 ಬೆಳೆ ಪದ್ಧತಿ (ಒಂದು ಬೆಳೆ ಕೋಯ್ಲಾದ ನಂತರ ಇನ್ನೊಂದು ಬೆಳೆ) ಅಥವಾ ಮಿಶ್ರ ಬೆಳೆ ಪದ್ಧತಿ (ರಾಗಿ + ತೊಗರಿ, ನೆಲಗಡಲೆ + ತೊಗರಿ, ಮುಸುಕಿನಜೋಳ + ತೊಗರಿ, ಅಲೂಗಡ್ಡೆ + ತೊಗರಿ, ಹತ್ತಿ + ಮೆಣಸಿನಕಾಯಿ + ಈರುಳ್ಳಿ) ಯನ್ನು ಅನುಸರಿಸುವುದರಿಂದ ಸುಸ್ಥಿರ ಆದಾಯ ಪಡೆಯಬಹುದು. ಜತೆಗೆ ಮಳೆ ಆಧರಿಸಿ ದೀರ್ಘಾವಧಿ, ಮಧ್ಯಮಾವಧಿ, ಅಲ್ಪಾವಧಿ ತಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

2. ನೀರು ಮತ್ತು ಮಣ್ಣು ಸಂರಕ್ಷಣೆ: ಹೊಲದಲ್ಲಿ ಬಿದ್ದ ಪ್ರತಿ ಹನಿ ನೀರನ್ನು ಹಿಡಿದಿಟ್ಟುಕೊಳ್ಳುವ ದೋಣಿ ಸಾಲು, ಸಾಲು ಬೋದು, ಚೌಕಮಡಿ, ಮುಂತಾದವುಗಳ ಮೂಲಕ ಮಣ್ಣಿನ ತೇವಾಂಶ ಕಾಪಾಡಿಕೊಂಡು ಹೆಚ್ಚುವರಿ ನೀರನ್ನು ಕೃಷಿ ಹೊಂಡ ಅಥವಾ ಇತರ ನೀರು ಸಂಗ್ರಹಣಾ ವ್ಯವಸ್ಥೆಯಲ್ಲಿ ಶೇಖರಿಸಿ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಬೆಳೆ ಸಂರಕ್ಷಣೆಗೆ ಮುಂದಾಗಬೇಕಿದೆ.

3. ಪೋಷಕಾಂಶಗಳ ನಿರ್ವಹಣೆ: ಕೇವಲ ಪ್ರಧಾನ ಪೋಷಕಾಂಶಗಳಾದ ಸಾರಜನಕ, ರಂಜಕ, ಪೋಟ್ಯಾಷ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಸದೆ ಯಾವುದೇ ಬೆಳೆಗೆ ಬೇಕಾದ ಆಗತ್ಯ ಸೂಕ್ಷ್ಮ ಪೋಷಕಾಂಶಗಳನ್ನು ಸಹ ಒದಗಿಸಿದ್ದೇ ಆದಲ್ಲಿ ಅಧಿಕ ಹಾಗೂ ಗುಣಮಟ್ಟದ ಇಳುವರಿ ಪಡೆಯಬಹುದು. ಆದಗ್ಯೂ ಅವಶ್ಯಕತೆಗನುಗುಣವಾಗಿ ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರಗಳ ಪೂರೈಕೆ ಸೂಕ್ತ. ಇದಲ್ಲದೆ, ಮಣ್ಣಿನ ಚಲನಶೀಲತೆ ಹೆಚ್ಚಿಸಲು ಜೈವಿಕ ಗೊಬ್ಬರ ಬಳಸುವುದು ಅಗತ್ಯ.

4. ಕಳೆ ನಿರ್ವಹಣೆ: ಕೃಷಿ ಬೆಳೆಗಳನ್ನು ಕಾಡುವ ಕಳೆಗಳ ನಿರ್ವಹಣೆ ಬಗ್ಗೆ ವಿಶೇಷ ಒತ್ತು ನೀಡ ಬೇಕಾಗಿದ್ದು, ಆಗತ್ಯತೆ ಅನುಸಾರ ಉದಯಪೂರ್ವ ಕಳೆನಾಶಕಗಳ ಬಳಕೆ, ನಂತರ ಸರಳ ಕಳೆ ನಿರ್ವಹಣಾ ಸಾಧನವಾದ ಸೈಕಲ್ ವೀಡರ್ಸ್ ಬಳಕೆ, ನೈಸರ್ಗಿಕ ಹೊದಿಕೆ ಬಳಕೆಗೆ ಒತ್ತು ನೀಡಬೇಕು.

5. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ: ಸಕಾಲಿಕ ಕೃಷಿ ಚಟುವಟಿಕೆ ಕೈಗೊಳ್ಳುವ ನಿಟ್ಟಿನಲ್ಲಿ ಕೃಷಿ ಕಾರ್ಮಿಕರ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪ್ರಸ್ತುತ ಬಿತ್ತನೆಯಿಂದ ಕಟಾವಿನವರೆವಿಗೂ ಎಲ್ಲ ಕೃಷಿ ಚಟುವಟಿಕೆಗಳಿಗೂ ಈಗಾಗಲೆ ಲಭ್ಯವಿರುವ ಯಂತ್ರೋಪಕರಣಗಳನ್ನು ತಾವೇ ಹೊಂದುವ ಮೂಲಕ ಅಥವಾ ಬಾಡಿಗೆ ಆಧಾರಿತ ಸೇವೆಗಳ ಮೂಲಕ ಪಡೆದು ಕೃಷಿಯಲ್ಲಿ ಬಳಸಿ ಕಾರ್ಯಕ್ಷಮತೆ ಹೆಚ್ಚಿಸಿ, ಅನಗತ್ಯ ವೆಚ್ಚಗಳನ್ನು ತಪ್ಪಿಸಬಹುದಾಗಿದೆ. ಒಟ್ಟಾರೆ, ಈ ಎಲ್ಲ ಸೂತ್ರಗಳನ್ನು ಕೃಷಿಕರು ಅನುಸರಿಸುವ ಮೂಲಕ ಉತ್ಪಾದನೆ, ಉತ್ಪಾದಕತೆ ಹೆಚ್ಚಿಸುವುದರ ಜತೆಗೆ ಆದಾಯವನ್ನೂ ದ್ವಿಗುಣಗೊಳಿಸಬೇಕಾಗಿದೆ. ಇದೇ ಕೇಂದ್ರ ಸರ್ಕಾರದ ಆಶಯವೂ ಆಗಿದೆ.

(ಲೇಖಕರು- ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ಕೃಷಿ ವಿವಿ, ಬೆಂಗಳೂರು)

For more information visit
University Library Website
Web - uasbagrilibindia.org
E-mail- librarian@uasbangalore.edu.in

State's first wild orchidarium set to wow one & all at Kali forest

PAVAN KUMAR H
HUBBALLI, DHNS





Bee orchid and Kathakkali dancer orchid. PHOTOS BY SACHIN PUNEKAR

Bee Orchid and rein orchid that bio-mimic female bee and spider respectively for pollination; spotted luisia, which is known as eternal kathakali dancer, are among the 65 epiphytic and terrestrial orchids that will be housed in Karnataka's first wild orchidarium being constructed by Forest Department at Kali Tiger Reserve (KTR) in Uttara Kannada district.

Western Ghats are home to at least 170 species of colourful and fascinating orchids, out of which more than 70 can be found in KTR, especially in the Anshi and Castle Rock ranges.

The orchidarium being constructed on the banks of Kaneri river at Nujji nursery near Kumbharwada in Joida taluk will serve two purposes, one for propagation and conservation of wild species, especially those that are red-listed and endemic and two, to create awareness among the people regarding the importance of these orchids in the ecosystem.

"Sighting orchids in the forest is a herculean task as most of them are found on the high branches of trees inside the deep jungle. Conservation of these species is very important as they play a vital role in maintaining the ecological balance of the Western Ghats," said conservation biologist Dr Sachin Punekar.

He has played a vital role in setting up the orchidarium and training frontline staff of the forest department in collecting orchids that fall off trees.

In a unique collaboration, forest guards and deputy range forest officers were trained in identifying and sustainably collecting and transplanting wild orchids.

KTR field director Maria Christu Raj said, with the financial assistance of Kaiga Nuclear Power Plant Corporation, and funds from KTR Foundation, the department is transforming an old nursery into an orchidarium.

The orchidarium will serve two main purposes; one ex-situ conservation of orchids found in the landscape in a scientific manner and two, reintroducing them in the forest and also as part of eco-tourism, where the public will be informed about the importance of orchids.

"A small nursery is also planned where the public can buy some generic orchids which are widely distributed," he said. They are working on the interpretation framework to present these orchids.

Castlerock deputy RFO Parasappa Jajappagol said within 45 days after being trained by Punekar, they started identifying 42 species of orchids in their ranges and started collecting fallen orchids. They later planted them within their anti-poaching camp. "A majority of the collected orchids have started flowering and fruiting now," he said.

Ukraine crisis: Kalyana K'taka farmers switch to sunflower

Rise in demand and lucrative price drives the shift

GURURAJA B R
KALABURAGI,DHNS

The war between Ukraine and Russia has prompted a shift in the cropping pattern in Kalyana Karnataka. There is a substantial increase in the area under sunflower cultivation in Raichur, Koppal and Yadgir districts in kharif. Those who used to grow maize, bengal gram, cotton among others are shifting to sunflower.

According to the agriculture department data, in Raichur district alone, sunflower seeds are sown in 17,000 hectares. Last year, the crop was grown in 3,500 hectares. In Yadgir, the area under sunflower cultivation has increased from 30 to 150 hectares.

Ukraine and Russia together meet 90% of India's sunflower oil needs. India imported about 13.2 million tonnes of edible oil last year. Of this, sunflower oil constituted about 2-2.2 million tonnes.

Devika R, joint director, Agriculture Department, Raichur, says that this trend is due to an increased demand and lucrative price for sunflower in the market. "They will opt for groundnut, another oil crop, in the next season (rabi)," she says.

Yadgir agriculture department joint director Abid S S says that the department resumed sunflower seed distribution this year after a gap of three years. "The state government has directed us to encourage farmers to grow sunflower," he says.

Soybean is another crop that is growing in popularity in Kalyana Karnataka. Kalaburagi Agriculture joint director Rathendranath Sugur says the area under soybean cultivation is likely to increase from 12,000 hectares last year to 30,000 hectares this year.

The reason for increase in the cultivation area is the good price in market and unlike tur dal, the main crop of the region, soybean can withstand excess and sustain scanty rainfall. As a result, they are switching from tur to soybean, says Sugur.

Bidar agriculture joint director Taramani G H said the area under soybean cultivation is set to increase from 1.82 lakh hectares last year to 2.6 lakh hectares this year in the district. "However, soybean is sensitive during germination," she cautions. Here, the department is promoting farmers to grow sunflower during the rabi season.

New favourite

Area under sunflower cultivation

District	2021	2022
Raichur	3,500 ha	17,000 ha
Yadgir	30 ha	150 ha

Farmers have shifted from maize, bengal gram, cotton to sunflower



Expected raise in area under soybean cultivation

District	2021	2022
Kalaburagi	2,000 ha	30,000 ha
Bidar	1.82 lakh ha	2.6 lakh ha

Farmers have switched from tur dal to soybean



'Karnataka has potential to be leader in oil palm cultivation'

State had conceived the idea in 1986 to cultivate palm in irrigated regions

B.S. SATISH KUMAR
BENGALURU



A file photo of an oil palm plantation in Chikkamagaluru district.

The oil palm mission started by the Centre in 2020-21 has started gaining traction particularly after the edible oil import was hit due to the Russia-Ukraine war. Karnataka had conceived the idea of palm oil mission about 35 years ago, though it did not succeed due to various reasons. Experts suggest that Karnataka should revive the mission as it has a conducive environment for oil palm cultivation which can also contribute to increasing farmers' incomes.

The idea of the mission had taken shape in 1985 when then Horticulture Minister B. Somashekhar visited the Central Plantation Crops Research Institute (CPCRI) in Kasaragod, Kerala, to interact with scientists. He had formed a committee headed by noted scientist P. Rethinam of the CPCRI to study the feasibility in Karnataka.

The committee had concluded that Karnataka had vast potential for oil palm cultivation under irrigation. According to the committee's report, an area of three lakh hectares of land could be brought under oil palm cultivation in the major irrigation command areas of the Thungabhadra, Upper Krishna Project, Malaprabha and Ghataprabha, Bhadra, and Cauvery. The committee had recommended that a processing factory should be established under the public sector for every 2,000 hectares of land within a radius of 40 km so that it would be possible to process the produce within 24 hours of harvesting.

"The main intention of taking measures for boosting oil palm cultivation then was to prevent excessive dependence on imports. But despite such aspirations, the scheme did not succeed as the subsequent governments did not show much interest. This resulted in several farmers even removing oil palms from their fields," said Mr. Somashekhar.

'Political will'

Speaking to *The Hindu*, Dr. Rethinam observed that the earlier mission to boost oil palm cultivation in Karnataka had failed due to a lack of "political and bureaucratic will". However, he noted that the State still had high potential for emerging as a leader in cultivation of oil palm. The Centre launched the National Mission on Edible Oils - Oil Palm in 2021-22 to augment the availability of edible oil in the country through expansion of the area under cultivation of oil palm and also reducing the burden of import. In 2020-21, India imported 133.5 lakh tonnes of edible oil, out of which palm oil accounted for 56%.

23-06-2022 Ind Exp Pg 04

ತೈಲ ಬೆಲೆ ಇಳಿಕೆಯಿಂದ ತಿನಿಸಿ ಸಾಮಗ್ರಿ ಬೆಲೆ ಕುಂಠಿತ ಸಾಧ್ಯತೆ

ನ ಹೂವಪ್ಪ ಎಚ್. ಇಂಗಳಗೊಂದಿ.

ಬೆಂಗಳೂರು: ಗ್ರಾಹಕರಿಗೆ ಸಂತಸದ ಸುದ್ದಿಯೊಂದು ಹೊರಬಿದ್ದಿದ್ದು, ಅಗತ್ಯ ವಸ್ತುಗಳಲ್ಲಿ ಅಡುಗೆಗೆ ಪ್ರಮುಖವಾಗಿ ಬೇಕಾದ ವಸ್ತುಗ ಬೆಲೆ ಬಾರಿ ಇಳಿಕೆಯಾಗುತ್ತಿದೆ. ಈಗಾಗಲೇ ಪಾಮ್ ಆಯಿಲ್ ಸಗಟು ಬೆಲೆಯಲ್ಲಿ ಲೀಟರಿಗೆ ಸುಮಾರು 25ರು.. ನಷ್ಟು ಇಳಿಕೆಯಾದೆ. ದರಡು ತಿಂಗಳ ಹಿಂದೆ ಸಗಟು 10 ಲೀ. ಪ್ಯಾಕೆಟ್ ತುಂಬಿದ ಒಂದು ಬಾಕ್ಸ್‌ಗೆ 1610 ರು. ಇತ್ತು ಈಗ ಅದರ ಬೆಲೆ 1350ರು. ಗೆ ಇಳಿದಿದೆ.

ಸಾಮಾನ್ಯವಾಗಿ ಎಲ್ಲಾ ಗ್ರಾಹಕರು ಬಳಸುವ ಸೂರ್ಯಕಾಂತಿ ಎಣ್ಣೆ ಕೂಡಾ ಹಂತ ಹಂತವಾಗಿ ಇಳಿಕೆಯಾಗಿದ್ದು, ಕಳೆದೆರಡು ತಿಂಗಳ ಹಿಂದೆ ಸೂರ್ಯಕಾಂತಿ ಎಣ್ಣೆ ಲೀ. ಗೆ . ಈ ಹಿಂದೆ 10 ಪಾಕೆಟ್ ಒಂದು ಬಾಕ್ಸ್‌ಗೆ ಸರಾಸರಿ 1900-2000 ಇತ್ತು. ಈಗ ಅದರ ಬೆಲೆ 1750-1850 ರು. ಗೆ. ಇಳಿಕೆ ಕಂಡಿದೆ. ಅಂದರೆ ಲೀಟರ್ ಗೆ 190-200 ರು. ಇದ್ದ ಬೆಲೆ ಈಗ 175-185 ರು. ಗೆ ಕುಸಿದಿದೆ. ಇನ್ನು 15 ಕೆಜೆ ಸೂರ್ಯಕಾಂತಿ ಎಣ್ಣೆಯ ಬೆಲೆ 3200-3250 ಇದ್ದದ್ದು, 2700-2850 ರು. ಗೆ ಇಳಿದಿದೆ.



ಇಂಡೋನೇಷಿಯಾ, ಮಲೇಶಿಯಾದ ಪಾಮ್ ಆಯಿಲ್ ದೇಶಕ್ಕೆ ಹೆಚ್ಚಾಗಿ ಬರುತ್ತಿದೆ. ರಷ್ಯಾ, ಉಕ್ರೆನ್ ಆಮದು ಸೂರ್ಯಕಾಂತಿ ಎಣ್ಣೆ ಸಬರಾಜು ಮೊದಲುಗಿಂತಲೂ ಹೆಚ್ಚುತ್ತಿದೆ. ಕೇಂದ್ರ ಸರಕಾರ ಆಮದು ಡ್ಯೂಟಿ ತೆರವುಗೊಳಿಸಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಅಡುಗೆ ಎಣ್ಣೆ ಬೆಲೆ ಇನ್ನೂ ಇಳಿಕೆಯಾಗಲಿದೆ.

ಡಿ.ಎಸ್. ಗೋವಿಂದರಾಜ್ ವ್ಯಾಪಾರಸ್ಥ

1.35 ಕೋಟಿ ಟನ್ ಎಣ್ಣೆ ಆಮದು

ಇಡೀ ವಿಶ್ವದಲ್ಲಿ ಅತಿ ಹೆಚ್ಚು ತಾಳೆ ಎಣ್ಣೆ ಆಮದು ಮಾಡಿಕೊಳ್ಳುವುದು ಭಾರತವೇ. ಪ್ರತಿ ವರ್ಷ ಭಾರತ 1.35 ಕೋಟಿ ಟನ್‌ಗಳಷ್ಟು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಶೇ. 63ರಷ್ಟು ಭಾಗ ತಾಳೆ ಎಣ್ಣೆಯೇ ಇದೆ. ತಾಳೆ ಎಣ್ಣೆ ಆಮದಿನಲ್ಲಿ ಇಂ ಡೋನೇಷ್ಯಾ ಮತ್ತು ಮಲೇಶಿಯಾ ಮೇಲೆ ಭಾರತ ಅವಲಂಬಿತವಾಗಿದೆ. ಇಂ ಡೋನೇಷಿಯಾದಿಂದ ಒಂದು ವರ್ಷದಲ್ಲಿ ಭಾರತ 40 ಲಕ್ಷ ಟನ್‌ಗಳಷ್ಟು ಎಣ್ಣೆ ಮಾಡಿಕೊಳ್ಳುತ್ತದೆ.

ಪಾಮ್ ಸೂರ್ಯಕಾಂತಿ ಆಯಿಲ್ ಸಗಟು ಬೆಲೆ ಲೀ. ಗೆ 15-25 ಕುಸಿದರೂ ಚಿಲ್ಲರೆ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಎಣ್ಣೆ ಇನ್ನು 190-200 ರು. ಗೆ ಹಾಗೂ ಪಾಮ್ ಆಯಿಲ್ 170-180 ರು. ಗೆ ಮಾರಾಟ ಮಾಡುತ್ತಿದ್ದಾರೆ.

ವೇಣುಗೋಪಾಲ್ ಸಾರ್ವಜನಿಕರು

ಅಡಕೆ ಬೆಳೆ ಉತ್ಪಾದನಾ ವೆಚ್ಚ ಹೆಚ್ಚಳಕ್ಕೆ ಆಗ್ರಹ

19-06-2022 Vv Pg 04

ಬೆಂಗಳೂರು: ಅಡಕೆ ಬೆಲೆಯ ಉತ್ಪಾದನಾ ವೆಚ್ಚ ಪರಿಷ್ಕರಿಸುವಂತೆ ಒತ್ತಾಯಿಸಲು ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗುವುದಾಗಿ ರಾಜ್ಯ ಅಡಕೆ ಟಾಸ್ಕ್ ಫೋರ್ಸ್ ಅಧ್ಯಕ್ಷರೂ ಆದ ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.



ಲಕ್ಷಾಂತರ ರೈತ ಹಾಗೂ ರೈತ ಕಾರ್ಮಿಕ ಕುಟುಂಬಗಳ ಆರ್ಥಿಕ ಬೆನ್ನೆಲುಬಾಗಿರುವ ಅಡಕೆ ಬೆಳೆಗೆ ಸುಸ್ಥಿರ ಬೆಲೆ ಒದಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬದ್ಧವಾಗಿದ್ದು, ಈ ಕುರಿತು ರೈತ ಸಮುದಾಯ ಯಾವುದೇ ಆತಂಕ ಪಡುವುದು ಬೇಡ ಎಂದು ಮನವಿ ಮಾಡಿದ್ದಾರೆ. ಹಣದುಬ್ಬರ ಹಾಗೂ ಇನ್ನಿತರ ಕಾರಣಗಳಿಂದಾಗಿ ಅಡಕೆ ಬೆಳೆ ಉತ್ಪಾದನಾ ವೆಚ್ಚವೂ ಹೆಚ್ಚಿದ್ದು ಪ್ರಸ್ತುತ ಪ್ರತಿ ಕಿಲೋ ಅಡಕೆ ಉತ್ಪಾದನಾ ಅಂದಾಜು ವೆಚ್ಚ 25 ರೂ.ಗಳಾಗಿದೆ. ಆರು ವರ್ಷಗಳ ಹಿಂದೆ ಇದನ್ನು ನಿಗದಿಪಡಿಸಲಾಗಿದೆ ಹಾಗೂ ಪುನಃ ಪರಿಷ್ಕರಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದಿದ್ದಾರೆ.

ಈ ಹಿಂದೆ ಕೇಂದ್ರ ಸರ್ಕಾರ ದೇಶಿಯ ಅಡಿಕೆ ಉತ್ಪನ್ನ ಅಂದಾಜು ವೆಚ್ಚ ಹೆಚ್ಚಳ ಮಾಡಿದಾಗ ಆಮದಾಗುತ್ತಿದ್ದ ಕಡಿಮೆ ಗುಣಮಟ್ಟದ ಅಡಿಕೆ ಪ್ರಮಾಣ ಗಣನೀಯವಾಗಿ ತಗ್ಗಿದ್ದನ್ನು ಸ್ಮರಿಸಿದ್ದಾರೆ. ವಿದೇಶದಿಂದ ಆಮದಾಗುವ ಅಡಿಕೆ ಗುಣಮಟ್ಟದಲ್ಲಿ ನಿಕೃಷ್ಟವಾಗಿದ್ದು ದೇಶಿಯ ಅಡಿಕೆ ಗುಣಮಟ್ಟದಲ್ಲಿ ಆತ್ಯುತ್ಕೃಷ್ಟವಾಗಿರುವುದು ದೃಢಪಟ್ಟಿದೆ ಎಂದಿದ್ದಾರೆ.